# ಶ್ರೀಮಾತೆ ಶಾರದಾದೇವಿಯವರ ನೆನಪು

ಮೂಲ ಬಂಗಾಳಿ : **ಸುಧೀರಚಂದ್ರ ಸಾಮುಯಿ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ನ**ನ್ನ ಅತ್ಯಂತ ಶೈಶವಾವಸ್ಥೆಯಲ್ಲೇ ಶ್ರೀಮಾತೆಯವರ ಸಾನ್ನಿಧ್ಯದಲ್ಲಿ ಬಂದು ಸೇರುವ ಸೌಭಾಗ್ಯ ನನ್ನದಾಗಿತ್ತು.[೧] ನನ್ನ ನೆನಪಿನಿಂದ ಕೆಲವು ಘಟನೆಗಳನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ. ನನ್ನ ತಂದೆಯ ಹೆಸರು ಸತೀಶ ಸಾಮುಯಿ. ನನ್ನ ಅಜ್ಜಿ ಶ್ರೀಮಾತೆಯವರಿಗೆ 'ಸತೂವಿನ ತಾಯಿ' ಎಂಬ ಹೆಸರಿನಿಂದ ಪರಿಚಿತರಾಗಿದ್ದರು. ಶ್ರೀಮಾತೆಯವರ 'ನೂತನ ಮನೆ' ನಿರ್ಮಾಣವಾದ ನಂತರ ನನ್ನ ಅಜ್ಜಿ ಶ್ರೀಮಾತೆಯವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿದಿನ ಬೆಳಿಗ್ಗೆ ಅವರ ಮಣ್ಣಿನ ನೆಲದ ಕೋಣೆಗಳನ್ನು ಸಾರಿಸಿ, ರಾತ್ರಿ ಉಪಯೋಗಿಸಿದ ಶ್ರೀಮಾತೆಯವರ ಬಟ್ಟೆಬರೆ ಇತ್ಯಾದಿಗಳನ್ನು ತೊಳೆಯುವುದು ಮುಂತಾದ ಕೆಲಸಗಳನ್ನು ನನ್ನ ಅಜ್ಜಿ ಮಾಡುತಿದ್ದರು. ಈ ಕಾರಣದಿಂದ ಬಹುತೇಕ ಪ್ರತಿದಿನವೂ ನನಗೆ ಅಜ್ಜಿಯೊಂದಿಗೆ ಶ್ರೀಮಾತೆಯವರ ಬಳಿಗೆ ಹೋಗುವ ಸುಯೋಗ ನನಗೆ ಲಭಿಸಿತ್ತು. ಶ್ರೀಮಾತೆ ಕೂಡ ನನ್ನನ್ನು ಅತ್ಯಂತ ಪ್ರೀತಿಯ ಕಣ್ಣುಗಳಿಂದ ನೋಡುತ್ತಿದ್ದರು. ಶ್ರೀಮಾತೆಯವರ ಆದೇಶದಂತೆ, ಹಿಂದಿನ ರಾತ್ರಿಯ ಶ್ರೀರಾಮಕೃಷ್ಣರ ನೈವೇದ್ಯದ ಪ್ರಸಾದ ಒಂದಿಷ್ಟನ್ನು ನನಗಾಗಿ ಪ್ರತ್ಯೇಕ ಇಡಲಾಗುತ್ತಿತ್ತು. ಅದರ ಆಸೆಯಿಂದ ಅಜ್ಜಿಯೊಂದಿಗೆ ಶ್ರೀಮಾತೆಯವರ ಮನೆಗೆ ಹೋಗುವುದು ನನಗೆ ಅಭ್ಯಾಸವಾಗಿತ್ತು.

ನನ್ನ ತಂದೆ ಅನಕ್ಷರಸ್ಥರು; ಆದರೆ ಉತ್ತಮ ಕೃಷಿಕರೆಂದು ಹಳ್ಳಿಯಲ್ಲೆಲ್ಲ ಪರಿಚಿತರಾಗಿದ್ದರು. ಶ್ರೀಮಾತೆ ನಡುನಡುವೆ ನಮ್ಮ ಮನೆಗೆ ಬರುತ್ತಿದ್ದರು. ಹೆಚ್ಚಾಗಿ ತರಕಾರಿಗಾಗಿಯೇ ಅವರು ಬರುತ್ತಿದ್ದುದು. ಅವರು ಹೇಳುತ್ತಿದ್ದರು: ''ನಮ್ಮಲ್ಲಿಗೆ ಕೆಲವು ಮಂದಿ ಗಂಡು, ಹೆಣ್ಣು ಮಕ್ಕಳು ಬಂದಿದ್ದಾರೆ. ಏನೇನು ತರಕಾರಿ ಕೊಂಡುಕೊಳ್ಳಲು ಸಿಗುತ್ತದೆ?'' ಎಷ್ಟು ಬೇಕೋ ಅಷ್ಟು ತರಕಾರಿ ತಮಗೆ ಬೇಕೆಂದು ಹೇಳಿ ಶ್ರೀಮಾತೆ, ''ಸತೂವಿನ ತಾಯಿ, ನಿನ್ನ ಮೊಮ್ಮಗನಿಗೆ ಹೇಳಿ ಈ ತರಕಾರಿಗಳನ್ನು ನಮ್ಮ ಮನೆಗೆ ಕಳುಹಿಸಿಕೊಡು'' ಎನ್ನುತ್ತಿದ್ದರು. ಅವುಗಳನ್ನು ನಾನು ಆನಂದದಿಂದ ಅಲ್ಲಿಗೆ ತೆಗೆದುಕೊಂಡು ಹೋಗಿ ತಲುಪಿಸುತ್ತಿದ್ದೆ. ನನ್ನ ತಂದೆ ಅನಕ್ಷರಸ್ಥರಾಗಿದ್ದುದರಿಂದ, ಎಲ್ಲ ವಸ್ತುಗಳ ಮೊತ್ತವನ್ನು ಸರಿಯಾಗಿ ಲೆಕ್ಕಮಾಡಿ ವಸೂಲು ಮಾಡುವುದು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಸಾಮಾನ್ಯವಾಗಿ ಜನರು ಅವರಿಗೆ ಮೋಸ ಮಾಡುತ್ತಿದ್ದರು. ಆದ್ದರಿಂದ ಶ್ರೀಮಾತೆ ನನ್ನ ಅಜ್ಜಿಗೆ ಹೇಳುತ್ತಿದ್ದರು: ''ಸತುವಿನ ತಾಯಿ, ನಿನ್ನ ಮೊಮ್ಮಗನಿಗೆ ಓದುಬರಹ ಕಲಿಸು. ಓದುಬರಹ ಕಲಿಯುವನು.'' ಹೀಗೆಂದು ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವಾದ ಮಾಡಿದ್ದರು. ನನ್ನ ದೃಢವಾದ ನಂಬಿಕೆಯೇನೆಂದರೆ, ಅವರಲ್ಲಿ ಅಪರಿಮಿತ ವಿಶ್ವಾಸವಿಲ್ಲದಿದ್ದರೆ, ನಿರಕ್ಷರಕುಕ್ಷಿಯಾಗಿದ್ದ ತಂದೆಯ ಮಗನಾಗಿದ್ದು ಕೂಡ ನಾನು ಜಯರಾಮಬಾಟಿ ಗ್ರಾಮದಿಂದ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರಥಮ ಪದವೀಧರನಾಗುವುದು ಎಂದಿಗೂ ಸಾಧ್ಯ ವಾಗುತ್ತಿರಲಿಲ್ಲ.

ಶ್ರೀಮಾತೆಯವರ ಒಂದು ಕಾಲಲ್ಲಿ ವಾತವಿತ್ತು. ಈ ಕಾರಣದಿಂದ ಅವರಿಗೆ ಮೊಣಕಾಲು ಮಡಚಿ ಕುಳಿತುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅವರು ನಮ್ಮ ಮನೆಗೆ ಬಂದಾಗ ಅವರಿಗೆ ಮಣ್ಣಿನ ಜಗಲಿಯಲ್ಲಿ ಕಂಬಳಿಹಾಸಿಕೊಡಬೇಕಿತ್ತು. ಅವರು ಕಾಲುನೀಡಿ ಕುಳಿತುಕೊಳ್ಳುತ್ತಿದ್ದರು. ನಾನು ನೋಡಿದ್ದೆ: ಅವರು ತಮ್ಮ ಹೊಸಮನೆಯ ತಮ್ಮ ಕೋಣೆಯಲ್ಲಿ ಮಂಚದ ಮೇಲೆ ಕಾಲುನೀಡಿ ಕುಳಿತಿರುತ್ತಿದ್ದರು, ಸ್ವಾಮಿ ಶಾರದಾನಂದರು ಅವರ ಪಾದಗಳಿಗೆ ತಾವರೆ ಹೂಗಳನ್ನು ಅರ್ಪಿಸಿ ಪೂಜೆ ಮಾಡುತ್ತಿದ್ದರು. ಆಗ ನಾನು ಆಶ್ಚರ್ಯಚಕಿತನಾಗಿ ಬಾಲ್ಯಸಹಜವಾದ ಮುಗ್ಧತೆಯಿಂದ ಯೋಚಿಸುತ್ತಿದ್ದೆ — ಅವರು ಯಾರು? ಮಹಾರಾಜ್ ಸಾಧು, ಸಂನ್ಯಾಸಿ ಆಗಿದ್ದರೂ ಕೂಡ ಅವರಿಗೆ ಏಕೆ ಪೂಜೆ ಮಾಡುತ್ತಿದ್ದಾರೆ? ಸ್ವಲ್ಪವಾದರೂ ತಿಳಿದುಕೊಳ್ಳುವಷ್ಟು ಸಾಮರ್ಥ್ಯ ಅಥವಾ ಬುದ್ಧಿ ಆಗ ನನಗಿರಲಿಲ್ಲ.

ಆಗ ಹಳ್ಳಿಯಲ್ಲಿ ಶಾಲೆ ಇರಲಿಲ್ಲ. ಆದ್ದರಿಂದಲೇ ಶ್ರೀಮಾತೆಯವರು ಹಳ್ಳಿಯ ಚಿಕ್ಕ ಮಕ್ಕಳಿಗಾಗಿ ಒಂದು ಪ್ರಾಥಮಿಕ ಶಾಲೆ ಆರಂಭವಾಗುವಂತೆ ಮಾಡಿದರು. ಆ ಶಾಲೆಯ ಅಧ್ಯಾಪಕರಿಗೆ ಸಂಬಳ ನೀಡುವುದಕ್ಕಾಗಿಯೂ ಅವರು ವ್ಯವಸ್ಥೆ ಮಾಡಿದರು. ಆಗ ಬಾಂಕುರದಿಂದ ವಿಭೂತಿ ಘೋಷ್ ಆಗಾಗ ಶ್ರೀಮಾತೆಯವರನ್ನು ನೋಡಲು ಜಯರಾಮಬಾಟಿಗೆ ಬರುತ್ತಿದ್ದರು. ಶ್ರೀಮಾತೆ ಅವರನ್ನು ಆತ್ಮೀಯವಾಗಿ 'ಕಾಲೋ ಮಾಣಿಕ್' (ಕಪ್ಪು ಮಾಣಿಕ್ಯ) ಎಂದು ಕರೆಯುತ್ತಿದ್ದರು. ಹಳ್ಳಿಯ ಬಡ ರೈತರ ಮೇಲೆ ಅವರಿಗೆ ತುಂಬಾ ಕಾಳಜಿಯಿತ್ತು. ಶ್ರೀಮಾತೆ ಅವರಿಗೆ ಹೀಗೆ ಹೇಳುತ್ತಿದ್ದುದನ್ನು ನಾನು ಕೇಳಿದ್ದೆ: ''ವಿಭೂತಿ, ನಮ್ಮ ನದಿಗೆ ಅಣೆಕಟ್ಟು ಕಟ್ಟಿ ನೀರನ್ನು (ಈಗಿನ 'ಶ್ರೀಮಾತೆಯವರ ಕೆರೆ'ಗೆ) ಹರಿಸಿದರೆ, ಹಳ್ಳಿಯ ಬಡರೈತರಿಗೆ ಉಪಯೋಗವಾದೀತು. ಬಹುತೇಕ ಬರದಿಂದ ಅವರ ಫಸಲು ನಷ್ಟವಾಗಿದೆ. ನೀನು ಪ್ರಯತ್ನ ಮಾಡಿ

---

೧ ಲೇಖಕರ ಮನೆ ಬಾಂಕುರ ಜಿಲ್ಲೆಯ ಜಯರಾಮಬಾಟಿಯಲ್ಲಿ. ಡೇವುಪಾಡಾ ಚಂಪಾಮಣಿ ಪ್ರೌಢಶಾಲೆಯ ಹಿಂದಿನ ಮುಖ್ಯೋಪಾಧ್ಯಾಯರಾಗಿದ್ದರು. ೧೯೫೪ನೇ ಇಸವಿಯಲ್ಲಿ, ತಮ್ಮ ೮೭ನೇ ವಯಸ್ಸಿನಲ್ಲಿ ಅವರು ತೀರಿಕೊಂಡರು. *(-ಸಂ)*

ನೀರಿಗೆ ಏನಾದರೂ ವ್ಯವಸ್ಥೆ ಮಾಡಿದರೆ ತುಂಬ ಉಪಕಾರ ವಾದೀತು.'' ಆ ಸಮಯದಲ್ಲಿ ಬದನಗಂಜ್ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಪ್ರಬೋಧ ಚಟ್ಟೋಪಾಧ್ಯಾಯರು ಹೆಚ್ಚಾಗಿ ಪ್ರತಿ ಶನಿವಾರ ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದರು. ಅವರೊಂದಿಗೆ ಹಲವು ಮಂದಿ ವಿದ್ಯಾರ್ಥಿಗಳೂ ಹೋಗುತ್ತಿದ್ದುದನ್ನು ನೋಡಿದ್ದೆ. ಅವರ ನಡುವೆ 'ರಾಮಮಯ' ಎಂಬ ಎಳೆಯ ವಯಸ್ಸಿನ ವಿದ್ಯಾರ್ಥಿಯೂ ಇದ್ದ. ಈ ರಾಮಮಯನು ಶ್ರೀಮಾತೆಯವರ ಅಸಾಧಾರಣ ಪ್ರೀತಿಗೆ ಪಾತ್ರನಾದನು. ಮುಂದೆ ಅವರೇ ಸ್ವಾಮಿ ಗೌರೀಶ್ವರಾನಂದ ಮಹಾರಾಜ್ ಆದರು. ಅವರು ಸಂಸಾರತ್ಯಾಗ ಮಾಡುವ ಇಚ್ಛೆಯಿಂದ ಶ್ರೀಮಾತೆಯವರ ಬಳಿಗೆ ಹೋದರು. ಆಗ ಅವರ ತಾಯಿ, ತಂದೆಯರು ಹಾಗೂ ಇತರ ಬಂಧುಗಳು ಶ್ರೀಮಾತೆಯವರ ಬಳಿಗೆ ಹೋಗಿ, ಅವರನ್ನು ಸಂಸಾರಕ್ಕೆ ಮರಳಿ ಹೋಗಲು ತುಂಬಾ ಒತ್ತಾಯ ಮಾಡುತ್ತ ಅತ್ತು ಕರೆಯತೊಡಗಿದರು. ಈ ದೃಶ್ಯವನ್ನು ನನ್ನ ಕಣ್ಣಿನಿಂದಲೇ ನೋಡುವ ಅವಕಾಶ ನನಗೆ ದೊರಕಿತು.

ಡಕಾಯಿತ ಅಮ್‌ಜಾದ್ ಆಗಾಗ ಶ್ರೀಮಾತೆಯವರನ್ನು ಭೇಟಿಯಾಗಲು ಬರುತ್ತಿದ್ದ. ಅವನನ್ನು ನೋಡಿ ನಮಗೆಲ್ಲ ತುಂಬಾ ಭಯವಾಗುತ್ತಿತ್ತು. ಆದರೆ ಶ್ರೀಮಾತೆಯವರು ಅವನನ್ನು ಆದರದಿಂದ ಮನೆಯೊಳಕ್ಕೆ ಕರೆದು, ಅನೇಕ ಬಾರಿ ಅವನಿಗೆ ಊಟ ಬಡಿಸಿಕೊಟ್ಟಿದ್ದರು; ನನ್ನ ಕಣ್ಣಿಂದಲೇ ನಾನು ಇದನ್ನು ನೋಡಿದ್ದೇನೆ.

ಆಗ ಹಳ್ಳಿಯಲ್ಲಿ ಕುಡಿಯುವ ನೀರಿಗೆ ಒಳ್ಳೆಯ ವ್ಯವಸ್ಥೆಯಿರಲಿಲ್ಲ. ಒಂದೇ ಕೆರೆಯಲ್ಲಿ ಸ್ನಾನ ಮಾಡಬೇಕಿತ್ತು. ಕುಡಿಯುವ ನೀರನ್ನೂ ಆ ಕೆರೆಯಿಂದಲೇ ಒಯ್ಯಬೇಕಿತ್ತು. ಆದ್ದರಿಂದಲೇ ಶ್ರೀಮಾತೆ ಪೂಜ್ಯ ಶರತ್ ಮಹಾರಾಜರಿಗೆ (ಸ್ವಾಮಿ ಶಾರದಾನಂದರು) ಹೇಳಿ ಜಯರಾಮಬಾಟಿ ಗ್ರಾಮದಲ್ಲಿ ಒಂದು ಒಳ್ಳೆಯ ಬಾವಿಯನ್ನು ತೋಡಲು ವ್ಯವಸ್ಥೆ ಮಾಡಿದ್ದರು.

ಜಗದ್ಧಾತ್ರೀ ಪೂಜೆಯ ಸಮಯದಲ್ಲಿ ಶ್ರೀಮಾತೆ ಗ್ರಾಮದ ಜನರಿಗೆಲ್ಲ ಭೂರಿಭೋಜನ ಮಾಡಿಸುತ್ತಿದ್ದರು. ಅವರೇ ನಿಂತು ಎಲ್ಲ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಿದ್ದರು. ಗ್ರಾಮದ ಪ್ರತಿಯೊಬ್ಬ ವ್ಯಕ್ತಿಯ ಬಗೆಗೂ ಅವರಿಗಿದ್ದ ಪ್ರೀತಿ, ಆತ್ಮೀಯತೆಗಳಿಗೆ ಎಲ್ಲೆಯೇ ಇರಲಿಲ್ಲ.

ಶ್ರೀಮಾತೆಯವರು ತಮ್ಮಂದಿರ ಮನೆಯಲ್ಲಿ ವಾಸವಾಗಿದ್ದಾಗ ನನಗೆ ತುಂಬ ಸಣ್ಣ ವಯಸ್ಸು. ಏನಾದರೂ ಕೆಲಸಕ್ಕಾಗಿ ಅವರ ಮನೆಗೆ ಹೋಗಿಬರುತ್ತಿದ್ದುದು ತುಂಬ ಕಡಿಮೆ. ಆದರೆ ಎಂದಾದರೂ ಹಾಗೆ ಹೋದಾಗ ನಾನು ಗಮನಿಸಿದ್ದೆ, ಹುಚ್ಚು ಯಜಮಾನಿ (ರಾಧುವಿನ ತಾಯಿ-ಸುರಬಾಲೆ) ಶ್ರೀಮಾತೆಯವರೊಂದಿಗೆ ಜಗಳವಾಡುತ್ತಿದ್ದರು. ಆಕೆಗೆ ಹುಚ್ಚು ಹಿಡಿದಿತ್ತು. ಆದ್ದರಿಂದ ಎಲ್ಲರೂ ಅವಳನ್ನು 'ಹುಚ್ಚಿ' ಎಂದು ಕರೆಯುತ್ತಿದ್ದರು. ಅವರು ಶ್ರೀಮಾತೆಯವರಿಗೆ ಅನೇಕ ಕಟುವಾದ ಮಾತುಗಳನ್ನಾಡಿ ಬಯ್ಯುತ್ತಿದ್ದರು. ಶ್ರೀಮಾತೆ ಅದೆಲ್ಲವನ್ನು ನಗುತ್ತಲೇ ಸಹಿಸುತ್ತಿದ್ದರು. ಆದರೆ ಒಂದು ಸಲ ಅವರ ಸಹನೆ ಕೆಟ್ಟುಹೋಯಿತು. ಹುಚ್ಚು ಯಜಮಾನಿ ಒಂದು ಕೊಳ್ಳಿಯೊಂದಿಗೆ ಶ್ರೀಮಾತೆಯವರನ್ನು ಹೊಡೆಯಲು ಬಂದಿದ್ದರು. ಕೆಟ್ಟಗಳಿಗೆಯಲ್ಲಿ ಶ್ರೀಮಾತೆಯವರು ಆಕೆಗೆ ಶಾಪ ಕೊಟ್ಟುಬಿಟ್ಟರು. ''ನಿನ್ನ ಇದೇ ಕೈ ಒಂದು ದಿನ ಬಿದ್ದುಹೋಗುವುದು'' ಎಂದಿದ್ದರು. ಆದರೆ ಆ ಕೂಡಲೇ ಅವರು ಗಂಭೀರ ಭಾವತಾಳಿ, ಅನುಕಂಪದಿಂದ, ''ಅಯ್ಯೋ! ನಾನು ಏನು ಮಾಡಿಬಿಟ್ಟೆ!'' ಎಂದರು. ಈ ಘಟನೆಯನ್ನು ನಾನು ಕಣ್ಣಿನಿಂದ ನೋಡಿಲ್ಲ, ಅಥವಾ ನೇರವಾಗಿ ಕೇಳಿಲ್ಲ ; ಇದನ್ನು ಶ್ರೀಮತಿ ಇಂದುಬಾಲಾ ದೇವಿಯ (ಶ್ರೀಮಾತೆಯವರ ಎರಡನೇ ತಮ್ಮನ ಪತ್ನಿ) ಬಾಯಿಯಿಂದ ಕೇಳಿದ್ದೆ. ನಾನು ಮುಂದೆ ಒಂದು ದಿನ ನೋಡಿದೆ, ಅದೇ ಹುಚ್ಚು ಯಜಮಾನಿಯವರ ಆರೋಗ್ಯ ಕೆಟ್ಟು ಹೋಗಿ, ಅವರು ಕುಷ್ಠರೋಗದಿಂದ ಪೀಡಿತರಾಗಿ ಅತ್ಯಂತ ಯಾತನೆಯನ್ನು ಅನುಭವಿಸಿದರು.

ಈ ನಡುವೆ ಅಲ್ಲಿಗೆ ಬರುವ ಭಕ್ತರ ಹಾಗೂ ಸಾಧುಗಳ ಸಂಖ್ಯೆ ಹೆಚ್ಚಾದುದರಿಂದ ಶ್ರೀಮಾತೆಯವರು ತಮ್ಮಂದಿರ ಮನೆಯಲ್ಲಿ ವಾಸಮಾಡುವುದು ಅಸಾಧ್ಯವಾಗುತ್ತ ಬಂತು. ಅದಕ್ಕಾಗಿ ಅವರಿಗಾಗಿ ಒಂದು ಪ್ರತ್ಯೇಕ ಮನೆಯನ್ನು ನಿರ್ಮಿಸಬೇಕೆಂದು ಸ್ವಾಮಿ ಶಾರದಾನಂದರಿಗೆ ಮನವರಿಕೆಯಾಯಿತು. ಪಕ್ಕದಲ್ಲೇ ರಾಮಶರಣನೆಂಬ ಕೆಲಸದವನ ಪಾಳುಬಿದ್ದ ಭೂಮಿಯನ್ನು ಖರೀದಿಸಿ, ಅಲ್ಲೇ ಒಂದು ಮಣ್ಣಿನ ಮನೆಯನ್ನು ಕಟ್ಟಲು ಆರಂಭಿಸಿದರು. ಈ ಕೆಲಸವನ್ನು ಮಾಡುವುದಕ್ಕಾಗಿ ರಾಸಬಿಹಾರಿ ಮಹಾರಾಜ್ ಹಾಗೂ ಜ್ಞಾನ್ ಮಹಾರಾಜ್ (ಆಗ ಇಬ್ಬರೂ ಬ್ರಹ್ಮಚಾರಿಗಳು) ನೇಮಕಗೊಂಡರು. ಮನೆಯ ನಿರ್ಮಾಣವಾದ ಕೂಡಲೇ ಶ್ರೀಮಾತೆ, ರಾಧು ಅಕ್ಕ ಹಾಗೂ ನಳಿನಿ ಅಕ್ಕ ಇಬ್ಬರೂ ಶ್ರೀಮಾತೆಯವರ ಹೊಸ ಮನೆಯಲ್ಲಿ ವಾಸಮಾಡಲು ಅಲ್ಲಿಗೆ ಹೋದರು. ಆಗಿನಿಂದಲೇ ನನ್ನ ಅಜ್ಜಿ ಆ ಮನೆಯಲ್ಲಿ ಮನೆವಾರ್ತೆಯ ಕೆಲಸಗಳಲ್ಲಿ ನೆರವು ನೀಡುತ್ತ ಬಂದರು. ನಾನು ಸಾಮಾನ್ಯವಾಗಿ ಪ್ರತಿದಿನವೂ ಶ್ರೀಮಾತೆಯವರ ಮನೆಗೆ ಹೋಗಿ ಬರುವುದು ಅಭ್ಯಾಸವಾಯಿತು.

ಶ್ರೀಮಾತೆಯವರು ಹೆಚ್ಚಾಗಿ ಮಲೇರಿಯಾದಿಂದ ಪೀಡಿತರಾಗಿರುತ್ತಿದ್ದರು. ಅವರಿಗೆ ಅನಾರೋಗ್ಯವೆಂಬ ಸುದ್ದಿ ತಿಳಿದ ಕೂಡಲೇ ಸ್ವಾಮಿ ಶಾರದಾನಂದರು 'ಉದ್ಬೋಧನ'ದಿಂದ ಹೊರಟು, ಕಲ್ಕತ್ತೆಯಿಂದ ಡಾಕ್ಟರ್ ಕಂಜೀಲಾಲ್ ಅವರನ್ನು ಕರೆದುಕೊಂಡು ಬರುತ್ತಿದ್ದರು. ಅನಾರೋಗ್ಯದಿಂದಾಗಿ ಶ್ರೀಮಾತೆಯವರ ದೇಹ ಅತ್ಯಂತ ಕ್ಷೀಣಿಸತೊಡಗಿತ್ತು. ಆದ್ದರಿಂದ ಅವರಿಗೆ ಹಾಲು ಕುಡಿಯುವುದು ಅತ್ಯಂತ ಆವಶ್ಯಕವೆಂದು ಭಾವಿಸಿ, ಅವರಿಗಾಗಿ ಒಂದು ಹಾಲು ಕರೆಯುವ ಹಸುವನ್ನು ಖರೀದಿಸ

ಲಾಯಿತು. ಆ ಹಸುವನ್ನು ಮೇಯಿಸಲು ನನ್ನ ಸಣ್ಣ ಮಾವ ರಾಮೇಂದ್ರ ಘೋಷ್ ಅವರನ್ನು ನೇಮಿಸಲಾಯಿತು. ಅವರು ಭಾದ್ರಪದ ಮಾಸದಲ್ಲಿ ಒಂದು ದಿನ ಬಯಲಿನಿಂದ ಹುಲ್ಲು ಕೊಯ್ದು ತರಲು ಹೋಗಿದ್ದಾಗ, ಅವರ ಎಡಗೈ ಬೆರಳಿಗೆ ಒಂದು ಹಾವು ಕಡಿದುಬಿಟ್ಟಿತು. ಬಾಂಕುರದ ವಿಭೂತಿಬಾಬು ಹಾಗೂ ಇನ್ನೊಬ್ಬ ಡಾಕ್ಟರ್ ಅವರ ಕೈಗೆ ಬಟ್ಟೆಯಿಂದ ಕಟ್ಟು ಹಾಕಿ, ಬೆರಳಿಗೆ ಚಾಕುವಿನಿಂದ ಗಾಯಮಾಡಿ ರಕ್ತವನ್ನು ಹೊರಹಾಕುತ್ತಿದ್ದರು. ಈ ಸುದ್ದಿಯನ್ನು ಕೇಳಿ ತಿಳಿದ ಶ್ರೀಮಾತೆ, ಘಟನೆ ನಡೆದಲ್ಲಿಗೆ ಬಂದು ಹೇಳಿದರು: ''ವಿಭೂತಿ, ಅದೆಲ್ಲ ಏಕೆ ಮಾಡುತ್ತಿದ್ದೀಯ ಅವನನ್ನು ಸಿಂಹವಾಸಿನಿ ದೇವಾಲಯಕ್ಕೆ ಕರೆದುಕೊಂಡು ಹೋಗು. ಮಾತೆಯ ಸ್ನಾನಜಲವನ್ನು ಅವನಿಗೆ ಕುಡಿಸು. ಹಾವು ಕಡಿದ ಜಾಗಕ್ಕೆ ಮಾತೆಯ ದೇವಾಲಯದ ಮಣ್ಣಿನ ಲೇಪ ಹಾಕಿಸು. ಅವನಿಗೆ ಗುಣವಾಗುವುದು.'' ಅದೇ ರೀತಿ ಮಾಡಲಾಯಿತು. ೨-೩ ದಿನಗಳಲ್ಲಿ ಮಾವ ಗುಣಮುಖರಾಗಿ ಮನೆಗೆ ಮರಳಿದರು.

ರಾಧು ಅಕ್ಕ ಹಾಗೂ ನಳಿನಿ ಅಕ್ಕ ಇವರಿಬ್ಬರ ಮೇಲೆ ಶ್ರೀಮಾತೆ ಯವರಿಗೆ ಎಂಥ ಗಾಢವಾದ ಮಮತೆ, ಪ್ರೀತಿಯಿತ್ತು ಎಂಬು ದನ್ನೂ ನನ್ನಿಂದ ವರ್ಣಿಸಿ ಹೇಳುವುದು ಸಾಧ್ಯವಿಲ್ಲ. ತಾಜ್‌ಪುರದ ಜಮೀನ್ದಾರರ ಮನೆಯ ಮಗ, ರಾಧು ಅಕ್ಕನ ಪತಿ ಮನ್ಮಥ ಚಟ್ಟೋಪಾಧ್ಯಾಯರು ಶ್ರೀಮಾತೆಯವರಿಂದ ತುಂಬಾ ಪ್ರೀತಿ, ಆತ್ಮೀಯತೆಗಳನ್ನು ಗಳಿಸಿದ್ದರು. ಆ ಸಮಯದಲ್ಲಿ ಅವರು ಹೆಚ್ಚಾಗಿ ಜಯರಾಮಬಾಟಿಗೆ ಬಂದು, ಶ್ರೀಮಾತೆಯವರ ಮನೆ ಯಲ್ಲೇ ಇರುತ್ತಿದ್ದರು; ಕೆಲವು ದಿನಗಳನ್ನು ಅಲ್ಲೇ ಕಳೆಯು ತ್ತಿದ್ದರು. ಅವರಿಗೆ ಕೆಲವೊಂದು ದುರಭ್ಯಾಸಗಳಿದ್ದವು. ಗಾಂಜಾ ಸೇವಿಸುತ್ತಿದ್ದರು, ಕತ್ತಲಾದರೆ ಗ್ರಾಮೋಫೋನ್‌ನೊಂದಿಗೆ ಒಂದು ಹರಟೆಮಲ್ಲರ ಗುಂಪನ್ನು ಸೇರಿಕೊಳ್ಳುತ್ತಿದ್ದರು. ಒಂದು ರಾತ್ರಿ ಗ್ರಾಮೋಫೋನ್ ಹಾಡು ಕೇಳಿಬರುತ್ತಿತ್ತು. ರಾತ್ರಿ ತುಂಬ ತಡ ವಾಗಿಬಿಟ್ಟಿತ್ತು. ಶ್ರೀಮಾತೆ ಸ್ವತಃ ತಾವೇ ಕೈಯಲ್ಲಿ ಲಾಟೀನು ಹಿಡಿದುಕೊಂಡು ಬಂದು ಅವನನ್ನು ಕರೆಯುತ್ತಿದ್ದರು — ''ಓ ಮನ್ಮಥ, ರಾತ್ರಿ ತುಂಬ ತಡವಾಗಿಬಿಟ್ಟಿದೆ, ನೋಡು. ನಾನು ನಿನ್ನ ಊಟವನ್ನು ತಂದಿಟ್ಟು ಕಾದು ಕುಳಿತಿದ್ದೇನೆ.'' ಅವರ ಈ ಮಾತನ್ನು ಕೇಳಿ ಮನ್ಮಥನು ಆ ಕೂಡಲೇ ಹೊರಟುಹೋದ. ಈ ಘಟನೆಯನ್ನು ನಾನು ಖುದ್ದಾಗಿ ನೋಡಿದ್ದೇನೆ. ನಳಿನಿ ಅಕ್ಕನ ಆಚರಣೆಗಳೆಲ್ಲ ಗೌಡೀ ವೈಷ್ಣವ ಬ್ರಾಹ್ಮಣ ವಿಧವೆಯರಂತಿದ್ದವು. ಅವರಿಗೆ ಶ್ರೀಮಾತೆಯವರ ಉದಾರವಾದ ಆಚರಣೆಗಳನ್ನು ಸಹಿಸಲಾಗುತ್ತಿರಲಿಲ್ಲ. ಯಾವಾಗಲೂ ಅವರು ಶ್ರೀಮಾತೆ ಮಾಡು ತ್ತಿದ್ದ ರೀತಿಗಳನ್ನು ಕಂಡು, ಅವರೊಂದಿಗೆ ವಾದಿಸುತ್ತಿದ್ದರು. ಅದಕ್ಕೆ ಉತ್ತರ ಕೊಡುತ್ತ ಶ್ರೀಮಾತೆ, ''ನೋಡು, ನಾನಂತೂ ನನ್ನ ಮಕ್ಕಳ (ಭಕ್ತರ, ಶಿಷ್ಯಂದಿರ) ಸಲುವಾಗಿ ಒಂದೆರಡು ಆಚರಣೆ ಗಳನ್ನು ಪಾಲಿಸಲಾಗುತ್ತಿಲ್ಲ. ನನ್ನ ಪಾಲಿಗೆ ನನ್ನ ಮಕ್ಕಳೆಲ್ಲರೂ ಒಂದೇ.''



ಶ್ರೀಮಾತೆ ಮತ್ತು ರಾಧು

ಶ್ರೀಮಾತೆ ಆ ಮನೆಯಲ್ಲಿದ್ದಾಗ ಅವರ ಇನ್ನೊಬ್ಬರು ಸೊಸೆ ಮಾಕು ಅಕ್ಕನ ಒಂದು ಮಗು, ಹಠಾತ್ತನೆ ಡಿಫ್ತೀರಿಯಾ ರೋಗಕ್ಕೆ ತುತ್ತಾಯಿತು. ಚಿಕಿತ್ಸೆ ಮಾಡಿಸಲಾಗದೆ ಆ ಮಗು ಇದ್ದಕ್ಕಿದ್ದಂತೆ ಸತ್ತುಹೋಯಿತು. ಸುದ್ದಿ ಕೇಳಿದ ನಾವು ಅಲ್ಲಿಗೆ ಹೋದೆವು. ಅಲ್ಲಿಗೆ ತಲುಪಿದಾಗ, ಮಾಕು ಅಕ್ಕನ ತಂದೆ, ನಳಿನಿ ಅಕ್ಕ ಹಾಗೂ ಇತರ ಬಂಧುಗಳೆಲ್ಲ ಜೋರಾಗಿ ಅತ್ತುಕರೆದು ಗೋಳಾಡುತ್ತಿದ್ದರು. ಶ್ರೀಮಾತೆ ಆ ಮಗುವನ್ನು ತುಂಬಾ ಪ್ರೀತಿಸುತ್ತಿದ್ದರು. ಶ್ರೀಮಾತೆ ಯವರೂ ಕೂಡ ತುಂಬ ದುಃಖಿಸುತ್ತಿದ್ದುದನ್ನು ನಾನು ಗಮನಿ ಸಿದೆ. ಆದರೆ ಅವರು ಸ್ವಲ್ಪ ಹೊತ್ತಿನಲ್ಲೇ ಎಲ್ಲರನ್ನೂ ಸಮಾಧಾನ ಪಡಿಸುತ್ತ ಸಾಂತ್ವನ ಹೇಳುತ್ತಿದ್ದುದನ್ನು ನೋಡಿದೆ. ಅವರ ಸಹನೆ ಯನ್ನು ಕಂಡು ನಾನು ಆಶ್ಚರ್ಯಗೊಂಡೆ.

ಜಯರಾಮಬಾಟಿಯಲ್ಲಿದ್ದ ವಿಶ್ವಾಸ್ ಮನೆತನದ ಬಾಲ ವಿಧವೆ ಭಾನು ಪಿಸಿ (ಅತ್ತೆ) ಯೊಂದಿಗೆ, ಶ್ರೀಮಾತೆಯವರಿಗಿದ್ದ ಗೆಳೆತನ, ಪ್ರೀತಿ ಇವುಗಳನ್ನು ಕುರಿತು ಒಂದೆರಡು ವಿಷಯಗಳನ್ನು ಹೇಳದಿದ್ದರೆ ನನ್ನ ಈ ಲೇಖನ ಅಸಂಪೂರ್ಣವಾಗಬಹುದು. ನಾನು ಗಮನಿಸಿದ್ದೆ , ಅವರಿಬ್ಬರೂ ಹೆಚ್ಚಾಗಿ ಜೊತೆಯಾಗಿ ಇರ ಬಯಸುತ್ತಿದ್ದರು. ಪ್ರತಿದಿನ ಅವರಿಬ್ಬರೂ ಬಾಂಡೂಜೀ ಕೆರೆಗೆ ಸ್ನಾನ ಮಾಡಲು ಹೋಗುತ್ತಿದ್ದರು. ಹೆಚ್ಚಾಗಿ 'ಪಾಲ್‌ಪರ್ವಣೆ' ದಿನಗಳಲ್ಲಿ ಅವರಿಬ್ಬರೂ ನೆರೆಹೊರೆಯವರೊಂದಿಗೆ ಬಯಲಲ್ಲಿ ಬದುವಿನ ಮೂಲಕ, ಆಮೋದರ ನದಿಗೆ ಸ್ನಾನ ಮಾಡಲು ಹೋಗುತ್ತಿದ್ದರು. ಕೃಷಿಕರು ಬಯಲಿನಲ್ಲಿ ಕೆಲಸ ಮಾಡುತ್ತಿದ್ದು

ದನ್ನು ನೋಡಿ ಅವರು, ''ಅವರೆಲ್ಲ ಎಷ್ಟುಕಷ್ಟಪಟ್ಟು ದುಡಿಯುತ್ತಿದ್ದಾರೆ, ಆದರೂ ಎರಡುಹೊತ್ತು ಹೊಟ್ಟೆತುಂಬ ಊಟ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ'' ಎನ್ನುತ್ತಿದ್ದರು. ಶ್ರೀಮಾತೆ ಸ್ನಾನ ಮಾಡುತ್ತಿದ್ದ ನದಿಯ ಸ್ನಾನಘಟ್ಟ ಇಂದು ಅಣೆಕಟ್ಟಾಗಿ ಬದಲಾಗಿದೆ; ಅದನ್ನು 'ಮಾಯೇರ್ ಘಾಟ್' ಎಂದು ಕರೆಯುತ್ತಾರೆ.

ಸಮಯ ಸಿಕ್ಕಿದಾಗಲೆಲ್ಲ ಆ ಇಬ್ಬರು ಸ್ನೇಹಿತೆಯರು ಒಟ್ಟಿಗೆ ಕುಳಿತು ಮಾತುಕತೆ ನಡೆಸುತ್ತಿದ್ದರು. ಅವರು ಏನೇನು ಮಾತುಕತೆ ನಡೆಸುತ್ತಿದ್ದರೋ ಅದೊಂದೂ ನನಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಆದರೂ ಅವರ ಮಾತುಗಳಲ್ಲಿ ಏನೇನು ನಾಲ್ಕೈದು ಅಂಶಗಳು ನೆನಪಿನಲ್ಲಿವೆಯೋ, ಅವು ಮುಂದೆ ನನಗೆ ಏನೆಂದು ತಿಳಿಯಿತೆಂದರೆ, ಅವೆಲ್ಲ ಪರಮಾರ್ಥ ಸಂಬಂಧಿಯಾದ ಅಥವಾ ಶ್ರೀ ಠಾಕೂರರನ್ನು ಕುರಿತು ಮಾತುಕತೆಗಳು — ಎಂದು.

ಪ್ರಾಸಂಗಿಕವಾಗಿ ಒಂದು ಘಟನೆ ನೆನಪಿಗೆ ಬರುತ್ತಿದೆ. ಈ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದೆ. ಈ ಘಟನೆ ನಡೆದುದು ಇಂದಿಗೆ ೭೫-೭೬ ವರ್ಷಗಳ ಹಿಂದೆ. ವಾರ, ದಿನಾಂಕ ಯಾವುದೂ ನನಗೆ ನೆನಪಿಲ್ಲ. ಆದರೆ ಅದು ಶ್ರೀಮಾತೆಯವರು ಆಚರಿಸುತ್ತಿದ್ದ ಜಗದ್ಧಾತ್ರೀ ಪೂಜೆಯ ದಿನವಾಗಿತ್ತು. ಪೂಜೆ ನಡೆಯುತ್ತಿದ್ದುದು ಶ್ರೀಮಾತೆಯವರ ಹಿರಿಯ ತಮ್ಮ ಪ್ರಸನ್ನ ಕುಮಾರ ಮುಖ್ಯೋಪಾಧ್ಯಾಯ ಹಾಗೂ ವರದಪ್ರಸಾದ ಮುಖ್ಯೋಪಾಧ್ಯಾಯ ಇವರ ಬೈಠಕ್‌ಖಾನೆಯಲ್ಲಿ. ಹಳ್ಳಿಯ ಜನರಿಗೆಲ್ಲ ಗಂಡಸು-ಹೆಂಗಸರೆಂಬ ಭೇದವಿಲ್ಲದೆ ಆಮಂತ್ರಣ ನೀಡಲಾಗಿತ್ತು. ಪ್ರತಿವರ್ಷವೂ ಆ ದಿನದಂದು ಶ್ರೀಮಾತೆಯವರು ಹಳ್ಳಿಯ ಜನರಿಗೆ ಒಂದು ದಿನ ಆಮಂತ್ರಣ ನೀಡಿ, ಅವರಿಗೆಲ್ಲ ಔತಣ ನೀಡುತ್ತಿದ್ದರು. ಅಲ್ಲಿಗೆ ಬಂದಿದ್ದ ಜನರ ಊಟಕ್ಕಾಗಿ ಶ್ರೀಮಾತೆಯವರ ಮೂರನೇ ತಮ್ಮ ಕಾಳೀಕುಮಾರ ಮುಖ್ಯೋಪಾಧ್ಯಾಯನ ಮನೆಗೆ ಸೇರಿದಂತಿದ್ದ ಪಾಳುಬಿದ್ದ ಭೂಮಿಯಲ್ಲಿ ಶಾಮಿಯಾನ ಹಾಕಿ ವ್ಯವಸ್ಥೆ ಮಾಡಲಾಗಿತ್ತು. ಶ್ರೀಮಾತೆಯವರ ಹಳೆಯ ಮನೆಯಲ್ಲಿ ಅಡುಗೆ ಮಾಡಲು ಸ್ಥಳಾಭಾವವಿದ್ದುದರಿಂದ, ಬಿಹಾರಿಲಾಲ್ ಘೋಷ್ ಅವರ ಮನೆಯಲ್ಲಿ ಅಡುಗೆ ನಡೆಯುತ್ತಿತ್ತು.

ಶ್ರೀಮಾತೆಯವರ ತಂದೆಯ ಮನೆತನಕ್ಕೆ ಕುಲಗುರುವಾಗಿದ್ದ ಪಾಕ್ ಮಾಜಿಟ್ಯ ಗ್ರಾಮದವರಾದ ಪಂಡಿತ ರಾಜೇಂದ್ರನಾಥ ಭಟ್ಟಾಚಾರ್ಯ ಸ್ಮೃತಿತೀರ್ಥರು ತಂತ್ರಧಾರಕರಾಗಿದ್ದರು; ಪುಖುರಿಯಾ ಗ್ರಾಮದವರೂ ಶ್ರೀಮಾತೆಯವರ ತಂದೆಯ ಮನೆತನದ ಕುಲಪುರೋಹಿತರೂ ಆಗಿದ್ದ ಹೃಷೀಕೇಶ ಭಟ್ಟಾಚಾರ್ಯ ಸ್ಮೃತಿತೀರ್ಥರು ಪೂಜೆ ಮಾಡುತ್ತಿದ್ದರು. ಸಪ್ತಮಿ, ಅಷ್ಟಮಿ, ನವಮಿಯ ದಿನಗಳಲ್ಲಿ ನಡೆಯಬೇಕಿದ್ದ ಪೂಜಾಕಾರ್ಯಗಳು ಮುಗಿದಿದ್ದವು. ಇನ್ನೂ ಹೋಮ, ಆರತಿ ಮುಗಿದಿರಲಿಲ್ಲ. ವೇಳೆ ಮಧ್ಯಾಹ್ನ ದಾಟಿತ್ತು. ಮಧ್ಯಾಹ್ನ ಊಟದ ಸಮಯದಲ್ಲಿ ಮೊದಲಿಗೆ ಬ್ರಾಹ್ಮಣರ ಊಟ, ಅನಂತರ ಬ್ರಾಹ್ಮಣ ಮಹಿಳೆಯರ ಊಟ ನಡೆಯುವುದು. ಅನಂತರ ಆ ಸ್ಥಳವನ್ನು ಸ್ವಚ್ಛಗೊಳಿಸಿದ ಬಳಿಕ, ಬ್ರಾಹ್ಮಣೇತರರಲ್ಲಿ ಮೇಲ್ವರ್ಗದವರ ಊಟ, ಕೊನೆಯಲ್ಲಿ ಇತರ ವರ್ಗಗಳವರ ಊಟ ನಡೆಯುತ್ತಿತ್ತು. ಬ್ರಾಹ್ಮಣರ ಊಟಕ್ಕೆ ವ್ಯವಸ್ಥೆಯೆಲ್ಲವೂ ಪೂರ್ಣಗೊಂಡಿತ್ತು. ಆಮಂತ್ರಿತರಾದ ಬ್ರಾಹ್ಮಣರೆಲ್ಲ ಪಂಕ್ತಿಯಲ್ಲಿ ಕುಳಿತಿದ್ದರು. ಅವರ ಎಲೆಗಳಿಗೆ ಅನ್ನ ಬಡಿಸಿಯಾಗಿತ್ತು. ಪಲ್ಯ ಬಡಿಸುತ್ತಿದ್ದರು. ಬ್ರಾಹ್ಮಣರು ಆಚಮನ ಇತ್ಯಾದಿಗಳನ್ನು ಮಾಡಿ ಆಹಾರ ಸ್ವೀಕರಿಸುತ್ತಿದ್ದರು. ಅಷ್ಟರಲ್ಲಿ ಇಬ್ಬರು ಬ್ರಹ್ಮಚಾರಿಗಳು ಪಂಕ್ತಿಯಲ್ಲಿ ಪಲ್ಯ ಬಡಿಸುವುದಕ್ಕಾಗಿ ಪಾತ್ರೆಗಳೊಂದಿಗೆ ಬಂದರು. ಅವರನ್ನು ನೋಡಿ ಬ್ರಾಹ್ಮಣರೆಲ್ಲ 'ಹೋ!ಹೋ!' ಎಂದು ಎದ್ದುಬಿಟ್ಟರು. ಅವರು ಜೋರಾಗಿ ಗದ್ದಲ ಮಾಡಿದರು. ಜೋರಾಗಿ ಅವರು ಹೇಳತೊಡಗಿದರು, ''ಅವರು ಯಾವ ಜಾತಿಯವರು? ಅವರಿಗೆ ಯಾರು ಬಡಿಸಲು ಹೇಳಿದರು? ನಮ್ಮ ಜಾತಿ ಕೆಟ್ಟುಹೋದೀತು. ನಾವು ಊಟ ಮಾಡಲಾರೆವು.'' ಹೀಗೆಂದು ಎಲ್ಲರೂ ಒಂದೇ ಗಳಿಗೆಯಲ್ಲಿ, ಅರ್ಧ ಊಟ ಮಾಡಿದಲ್ಲಿಂದಲೇ ಪಂಕ್ತಿಬಿಟ್ಟು ಎದ್ದು ನಿಂತರು. ಈ ದೃಶ್ಯವನ್ನು ನೋಡಿ ಶ್ರೀಮಾತೆ ಅತ್ಯಂತ ಆತಂಕಕ್ಕೊಳಗಾದರು. ತುಂಬ ವ್ಯಥೆಯಿಂದ ಅವರು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತ, ಎಲ್ಲರನ್ನು ಒತ್ತಾಯಿಸತೊಡಗಿದರು — ಬ್ರಾಹ್ಮಣರು ಯಾರೂ ಊಟ ಮಾಡದೆ ಅಲ್ಲಿಂದ ಹೋಗದಿರಿ — ಎಂದು. ಶ್ರೀಮಾತೆಯವರದು ಅದೆಂಥ ಸಮಚಿತ್ತತೆ! ಆದರೆ ಬ್ರಾಹ್ಮಣರು ಯಾರಿಗೂ ಅವರ ಮಾತನ್ನು ಕೇಳುವ ವ್ಯವಧಾನವಿರಲಿಲ್ಲ. ಆಗ ಶ್ರೀಮಾತೆಯವರು ಭಾನು ಪಿಸಿಯವರ ಸಹೋದರ ಸಂಬಂಧಿ ಯೋಗೇಂದ್ರನಾಥ ವಿಶ್ವಾಸನ ಬಳಿಗೆ ಹೋದರು. ಅವರ ಮನೆ ಶ್ರೀಮಾತೆಯವರ ಮನೆಗೆ ತೀರ ಹತ್ತಿರದಲ್ಲೇ ಇತ್ತು. ಅವರು ಶ್ರೀಮಾತೆಯವರ ತಮ್ಮಂದಿರಿಗೆ ಯಜಮಾನ ಕೂಡ ಆಗಿದ್ದ. ಮತ್ತೆ ನಾನು ನೋಡಿದೆ, ಶ್ರೀಮಾತೆಯವರು ಹಳ್ಳಿಯ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾದ ರಾಜೇಂದ್ರನಾಥ ಘೋಷ್ ಅವರ ಮನೆಗೆ ಹೋಗುತ್ತಿದ್ದರು, ಅವರನ್ನೂ ಬೇಡಿಕೊಳ್ಳಲು. ಹೀಗೆ ಅವರು ಎಲ್ಲರಿಗೂ ವಿನಂತಿಸಿಕೊಂಡರು, ಆ ಮೂಲಕ ಎಲ್ಲ ಗಂಡಾಂತರ ತಪ್ಪಿಹೋಗಲಿ, ಎಂದು; ಬ್ರಾಹ್ಮಣರೆಲ್ಲ ಊಟಮಾಡಿ ಹೋಗಲಿ, ಉಳಿದವರ ಊಟಕ್ಕೂ ತೊಂದರೆಯಾಗದಿರಲಿ — ಎಂದು. ಸ್ವಲ್ಪ ಹೊತ್ತಿನಲ್ಲೇ ಯೋಗಿಂದ್ರನಾಥ ವಿಶ್ವಾಸನ ಬೈಠಕ್‌ಖಾನೆಯಲ್ಲಿ ಹಳ್ಳಿಯ ಪ್ರಮುಖರ ಸಭೆ ಸೇರಿತು. ಆಗ ಗ್ರಾಮದ ಐದು ಮಂದಿ ಪ್ರಧಾನ ವ್ಯಕ್ತಿಗಳು ಹಾಗೂ ಜಮೀನ್ದಾರನ ಒಬ್ಬ ಪ್ರತಿನಿಧಿ — ಇವರು ಸೇರಿಕೊಂಡು ಎಲ್ಲ ವಿವಾದಗಳನ್ನು ಚರ್ಚಿಸಿ ಇತ್ಯರ್ಥ ಮಾಡುತ್ತಿದ್ದರು. ಈ ದಿನದ ಸಭೆಗೆ ಜಿಬಟಾ ಗ್ರಾಮದ ಜಮೀನ್ದಾರರ ಪತ್ನಿಯವರನ್ನೂ ಕರೆಯಲಾಗಿತ್ತು. ಸಭೆಯ ಜಮೀನ್ದಾರರ ಪ್ರತಿನಿಧಿಯಾಗಿ ಶಂಭುನಾಥ ರಾಯ್ ಬಂದಿದ್ದನು. ಅವನು ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದ ಶಿಷ್ಯನಾಗಿದ್ದನು. ಬ್ರಾಹ್ಮಣರ ಕಡೆಯಲ್ಲಿ ರಾಮದಾಸ ವಂದ್ಯೋ

ಪಾಧ್ಯಾಯ, ಶಿವರಾಮ ವಂದ್ಯೋಪಾಧ್ಯಾಯ, ರಾಮನಾಥ ಮುಖ್ಯೋಪಾಧ್ಯಾಯ, ಕೇದಾರನಾಥ ಮುಖ್ಯೋಪಾಧ್ಯಾಯ, ರಾಜಕುಮಾರ ಮುಖ್ಯೋಪಾಧ್ಯಾಯ ಹಾಗೂ ಇತರರು ಇದ್ದರು. ಸಭೆಯಲ್ಲಿ ನೆರೆದ ಬ್ರಾಹ್ಮಣರೆಲ್ಲ ಜಯರಾಮಬಾಟಿ ಗ್ರಾಮದವರೇ ಆಗಿದ್ದರು. ಸಭೆಯಲ್ಲಿ ಸೇರಿದ್ದ ಬ್ರಾಹ್ಮಣೇತರರೂ ಕೂಡ ಜಯರಾಮಬಾಟಿಯವರೇ ಆಗಿದ್ದರು. ಬೇರೆ ಗ್ರಾಮದವರೆಂದರೆ ಕೇವಲ ಶಂಭುನಾಥ ರಾಯ್ ಮಾತ್ರ. ಆತ ಆ ಪ್ರದೇಶದ ಪತ್ತನೀದಾರ, ಅಂದರೆ ಜಮೀನ್ದಾರನ ಪ್ರತಿನಿಧಿಯಾಗಿದ್ದ. ಅವನು ಪತ್ತನೀದಾರನಾಗಿದ್ದರೂ, ಜಿಬಟಾ ಗ್ರಾಮದ ರಾಯ್ ಮನೆತನದ ವತಿಯಿಂದ ಆ ಪ್ರದೇಶದಲ್ಲೆಲ್ಲ ಅತ್ಯಂತ ಸ್ಥಾನಮಾನ ಹೊಂದಿದ್ದ; ಅಲ್ಲಿನ ಹಿರಿಯ ವ್ಯಕ್ತಿ ಎಂಬ ಕಾರಣದಿಂದ ಅಲ್ಲಿನ ಸಭೆಗಳಿಗೆಲ್ಲ ಬಂದಿರುತ್ತಿದ್ದ.


ಸಾಕಷ್ಟು ಚರ್ಚೆಗಳಾದ ನಂತರ ಸಮಾಜದ ಹಿರಿಯರು ಬ್ರಾಹ್ಮಣರನ್ನು, ''ನಿಮಗೇನು ಬೇಕಾಗಿದೆ?'' ಎಂದು ಕೇಳಿದರು. ಏನು ಮಾಡಿದರೆ ಅವರೆಲ್ಲ ಆಹಾರ ಸ್ವೀಕರಿಸುವರು ಎಂದು ಕೇಳಿದರು. ಅವರೆಲ್ಲರೂ, ''ಶ್ರೀಮಾತೆಯವರಿಗೆ ಜುಲ್ಮಾನೆ ವಿಧಿಸಬೇಕು'' ಎಂದರು. ಈ ವಿಷಯವನ್ನು ಶ್ರೀಮಾತೆಯವರಿಗೆ ತಿಳಿಸಿದಾಗ, ಅವರು ಅದನ್ನು ನೀಡಲು ಒಪ್ಪಿದರು. ಕೊನೆಯಲ್ಲಿ, ಶ್ರೀಮಾತೆ ೨೫ ರೂಪಾಯಿ ಜುಲ್ಮಾನೆ ನೀಡಬೇಕೆಂದು ತೀರ್ಮಾನವಾಯಿತು. ಆಗ ಯಾರುಯಾರೋ ''ಜಯರಾಮಬಾಟಿ ಗ್ರಾಮದ ಕೃಷಿಕರು ಶ್ರೀಮಾತೆಯವರಿಗೆ ಜುಲ್ಮಾನೆ ವಿಧಿಸಿದರು'' ಎಂದು ಮಾತನಾಡಿಕೊಂಡರು. ಆದರೆ ಅವರು ಯಾರೂ ಆ ರೀತಿಯಲ್ಲಿ ಶ್ರೀಮಾತೆಯವರಿಗೆ ಜುಲ್ಮಾನೆ ವಿಧಿಸಿರಲಿಲ್ಲ.[೨]

ಈಗ ನಾನು ಜೀವನ ಸಂಧ್ಯೆಯನ್ನು ಸಮೀಪಿಸಿದ್ದೇನೆ. ಯಾವಾಗ ಇನ್ನೊಂದು ಸೀಮೆಯಿಂದ ಕರೆ ಬರುವುದೋ ಎಂದು ಕಾಯುತ್ತಿದ್ದೇನೆ. ಆದರೂ ನನ್ನ ಮನಸ್ಸಿನಲ್ಲಿ ದೃಢವಾಗಿ ಬೇರೂರಿ ನಿಂತಿರುವ ವಿಶ್ವಾಸವೇನೆಂದರೆ, ನಾನು ಶ್ರೀಮಾತೆಯವರ ದರ್ಶನ ಹಾಗೂ ಪಾದಸ್ಪರ್ಶದ ಭಾಗ್ಯವನ್ನು ಪಡೆದಿರುವುದರಿಂದ, ಮೃತ್ಯುವಿನ ನಂತರ ನನಗೆ ಮುಕ್ತಿ ಖಂಡಿತ ಲಭಿಸುವುದೆಂದು. ಅದನ್ನು ಯಾರಿಗೂ ತಡೆಯಲಾಗದು.[೩] ❁

---

೨ ಈ ಘಟನೆ ತುಸು ಭಿನ್ನ ರೀತಿಯಲ್ಲಿ ಸ್ವಾಮಿ ಈಶಾನಾನಂದರ 'ಮಾತೃ ಸಾನ್ನಿಧ್ಯೇ' ಎಂಬ ಗ್ರಂಥದಲ್ಲಿ ಬಂದಿದೆ. (ಪು.೩೩, ಅಡಿಟಿಪ್ಪಣಿ). ಸ್ವಾಮಿ ಈಶಾನಾನಂದರು ಈ ಘಟನೆಯನ್ನು ಸ್ವಾಮಿ ಕೇಶವಾನಂದರಿಂದ ಕೇಳಿದ್ದರು. ಸ್ವಾಮಿ ಗಂಭೀರಾನಂದರ '**ಶ್ರೀ ಮಾ ಶಾರದಾದೇವಿ**' ಗ್ರಂಥ ಕೂಡಾ (ಪು.೩೬೦) ಈ ಘಟನೆಯನ್ನು ವಿವರಿಸುತ್ತದೆ. ಅದಕ್ಕೂ ಮೂಲ ಸ್ವಾಮಿ ಈಶಾನಾನಂದರ ವರ್ಣನೆ. ಆದರೆ ಸ್ವಾಮಿ ಈಶಾನಾನಂದರ ಪ್ರಕಾರ ಪಂಕ್ತಿಯಿಂದ ಎದ್ದವರು ಜಿಬಟಾ ಗ್ರಾಮದ ಜಮಿನ್ದಾರರುಗಳು (ಅವರು ಸದ್ಗೋಪ ಜಾತಿಯವರು); ಸ್ವಾಮಿ ಗಂಭೀರಾನಂದರ ಗ್ರಂಥದ ಪ್ರಕಾರ ಎದ್ದವರು ಬ್ರಾಹ್ಮಣರು. ಶ್ರೀಮಾತೆಯವರ ಇನ್ನೊಬ್ಬ ಅಳಿಯ ಗಣಪತಿ ಮುಖ್ಯೋಪಾಧ್ಯಾಯನ ಪ್ರಕಾರ ಲೇಖಕರ ವಿವರಣೆ ಸರಿಯಾಗಿಲ್ಲ. *(–ಸಂಪಾದಕ)*

೩ ಉದ್ಬೋಧನ, ಸಂಖ್ಯೆ ೯, ಆಶ್ವಯುಜ, ೧೩೪೯



## ಆಧ್ಯಾತ್ಮಿಕತೆ ಮತ್ತು ಮಾನವೀಯತೆ

ಸ್ವಾಮಿ ಶಾರದಾನಂದರು ಮಹಾಸಮಾಧಿಯನ್ನು ಹೊಂದಿದಾಗ, ಅಂತ್ಯಕ್ರಿಯೆಗಾಗಿ ಅವರ ಕಳೇಬರವನ್ನು ಬೇಲೂರು ಮಠಕ್ಕೆ ತರಲಾಯಿತು. ಮಠದ ಪ್ರಧಾನ ಕಟ್ಟಡದ ಹಿಂದಿದ್ದ ಮಾವಿನ ಮರದ ಕೆಳಗೆ ಕಳೇಬರವನ್ನು ಇರಿಸುತ್ತಿದ್ದಂತೆಯೆ ಮಹಾಪುರುಷ್ ಮಹಾರಾಜ್ (ಸ್ವಾಮಿ ಶಿವಾನಂದರು) ತಮ್ಮ ಕೋಣೆಯಿಂದ ಕೆಳಗಿಳಿದು ಬಂದರು. ಆಗ ಅಲ್ಲಿ ನಾನೊಂದು ಅವಿಸ್ಮರಣೀಯ ದೃಶ್ಯವನ್ನು ಕಂಡೆ. ಶಾರದಾನಂದರ ಮೃತ ಶರೀರದ ಬಳಿ ನಿಂತಿದ್ದ ಮಹಾಪುರುಷ್ ಮಹಾರಾಜರು ಕಣ್ಣೀರಿಳಿಸುತ್ತ, ಗದ್ಗದಿತ ಕಂಠದಿಂದ ಹೇಳತೊಡಗಿದರು, ''ನನ್ನನ್ನು ಇಲ್ಲಿಯೇ ಬಿಟ್ಟು ಹೀಗೆ ಹೊರಟುಹೋಗುವುದು ಸರಿಯೇ, ಶರತ್? ನಿನಗಿಂತ ನಾನು ವಯಸ್ಸಿನಲ್ಲಿ ಹಿರಿಯ. ನೀನು ನನ್ನನ್ನು 'ದಾದಾ' (ಅಂದರೆ, ಅಣ್ಣ) ಎಂದೇ ಕರೆಯುತ್ತಿದ್ದೆ. ನನ್ನನ್ನೇಕೆ ಅಗಲಿ ಹೊರಟುಹೋದೆ?'' ಅವರು ಗಳಗಳನೆ ಅತ್ತುಬಿಟ್ಟರು. ಸಾಕ್ಷಾತ್ಕಾರ ಪಡೆದ ಸಂನ್ಯಾಸಿಯಾಗಿದ್ದರೂ, ತಮ್ಮ ಮಾನವೀಯ ಭಾವನೆಗಳನ್ನು ಅವರು ಅದುಮಿಡಲಿಲ್ಲ. ಆಧ್ಯಾತ್ಮಿಕತೆ ಹಾಗೂ ಮಾನವೀಯತೆ ಇವೆರಡರ ಸಮನ್ವಯ ಒಂದು ಅಸಾಧಾರಣವಾದ ಸಂಗತಿ. ಇದನ್ನು ನಾನು ಮಹಾಪುರುಷ್ ಮಹಾರಾಜ್ ಹಾಗೂ ಸ್ವಾಮಿ ಶಾರದಾನಂದರಂತಹ ಶ್ರೇಷ್ಠ ಸಾಧುಗಳಲ್ಲಿ ಕಂಡಿದ್ದೇನೆ. ಅದು ಉಂಟುಮಾಡುವ ಪರಿಣಾಮವೂ ಅತ್ಯದ್ಭುತ. ಶ್ರೀರಾಮಕೃಷ್ಣರ ಶಿಷ್ಯಂದಿರ ನಡುವೆ ಉಂಟಾಗಿದ್ದ ಪ್ರೀತಿ, ಗೌರವಗಳ ಅಭೇದ್ಯ ಸಂಬಂಧವು ಅವರನ್ನು ಒಂದಾಗಿ ಬೆಸೆದಿದ್ದವು. ಅವರಿಬ್ಬರ ನಡುವೆ ಏನಾದರೂ ಭಿನ್ನಾಭಿಪ್ರಾಯಗಳಿವೆಯೇ ಎಂದು ಒಂದು ಸಲ ನಾನು ಸ್ವಾಮಿ ಶಾರದಾನಂದರನ್ನು ಕೇಳಿದ್ದೆ. ಆಗ ಅವರು ಉತ್ತರಿಸಿದ್ದರು : ''ಇದ್ದೇ ಇವೆ. ಆದರೆ ಅವು ನಮ್ಮನ್ನು ಆಳವಾಗಿ ಪ್ರಭಾವಿಸಲಾರವು. ಏಕೆಂದರೆ ಶ್ರೀರಾಮಕೃಷ್ಣರು ನಮ್ಮನ್ನು ಅಭೇದ್ಯವಾದ ಪ್ರೀತಿಯ ಸಂಬಂಧದಿಂದ ಹೆಣೆದಿದ್ದಾರೆ.''

**—ಸ್ವಾಮಿ ನಿಖಿಲಾನಂದ,** *('Mahapurush Maharaj As We Saw Him' ಗ್ರಂಥದಿಂದ, ಪು. ೬೨)*